◆ **ಪ್ರಭುತ್ವದ ಕುರ್ಚಿಯಲ್ಲಿ ಕೂತಿರುವವರು ತಮಗೆ ಬೇಕಾದ ಹಾಗೆ ಇತಿಹಾಸವನ್ನು ತಿರುಚಿ ಬರೆಯುವ, ಜನರ ಮೇಲೆ ಹೇರುವ ಪ್ರವೃತ್ತಿ ಬೆಳೆಯುತ್ತಿದೆ. ಇತಿಹಾಸದ ವಿದ್ಯಾರ್ಥಿಯಾಗಿ ಇದನ್ನು ನೀವು ಹೇಗೆ ನೋಡುತ್ತೀರಿ?**

ಮೂಲ ಆಕರಗಳನ್ನು ನೋಡುವುದನ್ನು ಕಲಿತುಕೊಳ್ಳಬೇಕು. ಶಾಸನಗಳು, ಓಲೆಗರಿ, ಹಸ್ತಪ್ರತಿಗಳು ಮತ್ತು ಸಾಹಿತ್ಯಗಳೇ ನಮ್ಮ ಮೂಲ ಆಕರಗಳು. ಸಂಶೋಧಕರು ಈ ಮೂಲ ಆಕರಗಳನ್ನು ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಎಚ್.ಎಚ್. ವಿಲ್ಸನ್ ಎನ್ನುವ ವ್ಯಕ್ತಿ ತುಂಬ ಕೆಲಸ ಮಾಡಿದ್ದಾನೆ. ಅದರ ಬಗ್ಗೆ ಎರಡು ಮಾತಿಲ್ಲ. ವಿಷ್ಣುಪುರಾಣವನ್ನು ಇಂಗ್ಲಿಷಿಗೆ ಅನುವಾದ ಮಾಡಿದ್ದಾನೆ. ಮ್ಯಾಕ್ಸ್ ಮುಲ್ಲರ್ ಕೂಡ ತುಂಬ ಕೆಲಸ ಮಾಡಿದ್ದಾನೆ. ಅವರ ಧೋರಣೆಗಳಿಗೆ ಅನುಗುಣವಾಗಿ ಅವರು ಮಾಡಿದರು. ಹಾಗಂತ ನಾವೂ ಅದನ್ನು ಈವತ್ತು ಪರಿಗಣಿಸಬೇಕೇ? ಇದನ್ನು ಪ್ರಭುತ್ವ ಅಲ್ಲ, ನಮ್ಮ ಸಂಶೋಧಕ ವಲಯದವರು ಒಗ್ಗೂಡಿ ನಿರ್ಧರಿಸಬೇಕು.

ಇದರಲ್ಲಿ ಸರ್ಕಾರದ್ದು ಪೂರ್ತಿ ಪ್ರಮಾಣದಲ್ಲಿ ಪಾತ್ರ ಇರಲು ಸಾಧ್ಯವಿಲ್ಲ. ಸರ್ಕಾರ ಅಭಿಪ್ರಾಯ ಕೇಳೋದು ಸಂಶೋಧಕರನ್ನೇ ಅಲ್ಲವೇ? ಅವರು ಆಗ ಸರಿಯಾದ ಸಲಹೆ ಕೊಡಬೇಕಲ್ಲವೇ? ನಮ್ಮಲ್ಲಿ ಪ್ರಕಾಂಡ ಪಂಡಿತರು ಮಾಡಿರುವ ಸಂಶೋಧನೆಗಳು ಇರುವಾಗ ಈಗಲೂ ಮ್ಯಾಕ್ಸ್ ಮುಲ್ಲರ್ ಸಂಶೋಧನೆಯನ್ನೇ ಇಟ್ಟುಕೊಂಡಿರುವುದರಲ್ಲಿ ಏನಾದರೂ ಅರ್ಥ ಇದೆಯೇ? ಕನ್ನಡದಲ್ಲಿಯಂತೂ ಜಯಚಾಮರಾಜೇಂದ್ರ ಸಂಸ್ಕೃತ ಗ್ರಂಥಮಾಲೆಯಲ್ಲಿ ಬಂದಿರುವ ಋಗ್ವೇದದ ಅನುವಾದದ ಮುಂದೆ ಬೇರೆ ಉಂಟೆ? ಅದನ್ನು ಬಿಟ್ಟು ಮ್ಯಾಕ್ಸ್ ಮುಲ್ಲರ್ ಅವರ ದೋಷಪೂರ್ಣ ಅನುವಾದವನ್ನೇ ಇಟ್ಟುಕೊಳ್ಳುತ್ತೇನೆ ಅಂದರೆ ಅದಕ್ಕೆ ಹೊಣೆ ಯಾರು? ಅದನ್ನು ಸರ್ಕಾರ ನಿರ್ಬಂಧಿಸಬೇಕಾ? ನಾವು ನಿರ್ಬಂಧಿಸಬೇಕಾ? ನಮ್ಮಲ್ಲಿಯೇ ತಿಳಿದುಕೊಳ್ಳಬೇಕು ಎಂಬ ಆಸಕ್ತಿ ಇಲ್ಲದೇ ಇದ್ದಾಗ ಸರ್ಕಾರವನ್ನು ದೂರಿ ಏನು ಪ್ರಯೋಜನ?

ಬ್ರಿಟಿಷರ ಅನಂತರ ಬಂದ ಸರ್ಕಾರಗಳಲ್ಲಿ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಇತಿಹಾಸವನ್ನು ತಿರುಚುವ ಅಭ್ಯಾಸ ಇತ್ತು. ಆಮೇಲೆ ಬಂದ ಎಲ್ಲ ಸರ್ಕಾರಗಳೂ ಅದೇ ಥರ ಮಾಡಿವೆ ಎಂದು ಹೇಗೆ ಹೇಳುವುದು?

ನಮ್ಮಲ್ಲಿ ರಾಮಸೇತು ಗಲಾಟೆ ಇದೆ. ಈಗಾಗಲೇ ಬಿ.ಬಿ. ಲಾಲ್ ಎನ್ನುವ ಪ್ರಸಿದ್ಧ ಪುರಾತತ್ತ್ವ ಶಾಸ್ತ್ರಜ್ಞರು ರಾಮಸೇತು ಇತ್ತು ಎನ್ನುವುದಕ್ಕೆ ಎಲ್ಲ ಆಧಾರಗಳನ್ನೂ ನೀಡಿದ್ದಾರೆ. ಮುಮ್ಮಡಿ ಸೋಮೇಶ್ವರ 'ಮಾನಸೋಲ್ಲಾಸ'ದಲ್ಲಿ 'ರಾಮಸೇತು ಈಗಲೂ ಇದೆ. ಅದರ ಮೇಲೆ ಜನ ನಡೆದುಕೊಂಡು ಹೋಗ್ತಾರೆ' ಎಂದು ಬರೆದರೆ ಅವನು ಸುಳ್ಳು ಹೇಳುತ್ತಿದ್ದಾನೆ ಅನ್ನುತ್ತಾರೆ. ಯಾಕೆ ಸುಳ್ಳು? ಆಧಾರ ತೋರಿಸಿ ಎಂದರೆ ಯಾರೂ ತೋರಿಸುವುದಿಲ್ಲ.

◆ **ಇಂದು ನಿಜವಾದ ಸಂಶೋಧನೆಗಳು ಮತ್ತು ನಕಲಿ ಸಂಶೋಧನೆಗಳ ನಡುವೆ ವ್ಯತ್ಯಾಸ ಗುರ್ತಿಸುವುದೇ ಕಷ್ಟವಾಗಿದೆ. ನಿಜವಾದ ವಿಶ್ವವಿದ್ಯಾಲಯಗಳಿಗಿಂತ 'ವಾಟ್ಸ್ಆ್ಯಪ್ ಯೂನಿವರ್ಸಿಟಿ'ಗಳೇ ಹೆಚ್ಚು ಸಕ್ರಿಯವಾಗಿರುವ ಈ ಕಾಲದಲ್ಲಿ ಜವಾಬ್ದಾರಿಯುತ ಸಂಶೋಧಕ ಇವುಗಳನ್ನು ಹೇಗೆ ಮೀರಬೇಕು?**

ಗಂಭೀರವಾಗಿ ಕೆಲಸ ಮಾಡುವ ಸಂಶೋಧಕರು ಈ ರೀತಿಯ ನಕಲಿ ಶೋಧನೆಗಳನ್ನು ಖಂಡಿಸುತ್ತಲೇ ಇರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಅದೇ ಒಂದು ದಾರಿ. ಇಂದು ಪಿಎಚ್.ಡಿ. ಮಾರಾಟದ ವಸ್ತುವಾಗಿದೆ. ಇಂಥದರ ಮೇಲೆ ಕಠಿಣವಾದ ಕ್ರಮವನ್ನೇ ಕೈಗೊಳ್ಳಬೇಕು. ಯಾವ ರೀತಿ ಎಂದು ನಾನು ಹೇಳುವುದು ಕಷ್ಟ. ಸಂದರ್ಭಾನುಸಾರ ನೋಡಬೇಕು. ಮೂರು ಗಂಟೆಯ